**ದಕ್ಷಿಣ ಆಫ್ರಿಕಾ ಗಣರಾಜ್ಯಕ್ಕೆ ತೆರಳುವ ಮುನ್ನ ಪ್ರಧಾನಮಂತ್ರಿಯವರ ನಿರ್ಗಮನದ ಹೇಳಿಕೆ**

ನವೆಂಬರ್ 21, 2025

ದಕ್ಷಿಣ ಆಫ್ರಿಕಾ ಅಧ್ಯಕ್ಷತೆಯ ಅಡಿಯಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ ನಡೆಯುತ್ತಿರುವ 20 ನೇ G20 ನಾಯಕರ ಶೃಂಗಸಭೆಗೆ ಹಾಜರಾಗಲು, ಗೌರವಾನ್ವಿತ ಶ್ರೀ ಸಿರಿಲ್ ರಾಮಫೋಸಾ ಅವರ ಆಹ್ವಾನದ ಮೇರೆಗೆ, ನಾನು 2025 ನವೆಂಬರ್ 21-23 ರವರೆಗೆ ದಕ್ಷಿಣ ಆಫ್ರಿಕಾ ಗಣರಾಜ್ಯಕ್ಕೆ ಭೇಟಿ ನೀಡುತ್ತಿದ್ದೇನೆ.

ಈ ಶೃಂಗಸಭೆಯು ವಿಶೇಷವಾಗಿದೆ, ಏಕೆಂದರೆ, ಇದು ಆಫ್ರಿಕಾದಲ್ಲಿ ನಡೆಯುತ್ತಿರುವ ಮೊದಲ G20 ಶೃಂಗಸಭೆಯಾಗಿದೆ. 2023 ರಲ್ಲಿ ಭಾರತದ G20 ಅಧ್ಯಕ್ಷತೆಯ ಸಮಯದಲ್ಲಿ, ಆಫ್ರಿಕನ್ ಒಕ್ಕೂಟವು G20 ಸದಸ್ಯತ್ವ ಪಡೆಯಿತು.

ಪ್ರಮುಖ ಜಾಗತಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಶೃಂಗಸಭೆಯು ಒಂದು ಅವಕಾಶವಾಗಿದೆ. ಈ ವರ್ಷದ G20 ಯ ವಿಷಯವು 'ಒಗ್ಗಟ್ಟು, ಸಮಾನತೆ ಮತ್ತು ಸುಸ್ಥಿರತೆ' ಆಗಿದೆ, ಈ ಮೂಲಕ ದಕ್ಷಿಣ ಆಫ್ರಿಕಾ ಭಾರತದ ನವದೆಹಲಿ ಮತ್ತು ಬ್ರೆಜಿಲ್‌ನ ರಿಯೋ ಡಿ ಜನೈರೋದಲ್ಲಿ ನಡೆದ ಹಿಂದಿನ ಶೃಂಗಸಭೆಗಳ ಫಲಿತಾಂಶಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದೆ. 'ವಸುಧೈವ ಕುಟುಂಬಕಂ' ಮತ್ತು 'ಒಂದು ಭೂಮಿ, ಒಂದು ಕುಟುಂಬ ಮತ್ತು ಒಂದು ಭವಿಷ್ಯ' ಎಂಬ ನಮ್ಮ ದೂರದೃಷ್ಟಿಗೆ ಅನುಗುಣವಾಗಿ ಶೃಂಗಸಭೆಯಲ್ಲಿ ಭಾರತದ ದೃಷ್ಟಿಕೋನವನ್ನು ನಾನು ಪ್ರಸ್ತುತಪಡಿಸುತ್ತೇನೆ

ಪಾಲುದಾರ ದೇಶಗಳ ನಾಯಕರೊಂದಿಗೆ ನನ್ನ ಸಂವಹನಗಳಿಗಾಗಿ ಮತ್ತು ಶೃಂಗಸಭೆಯ ನೇಪಥ್ಯದಲ್ಲಿ ನಿಗದಿಪಡಿಸಲಾದ 6 ನೇ IBSA ಶೃಂಗಸಭೆಯಲ್ಲಿ ಭಾಗವಹಿಸಲು ನಾನು ಎದುರು ನೋಡುತ್ತಿದ್ದೇನೆ.

ಭೇಟಿಯ ಸಮಯದಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿರುವ ಭಾರತೀಯ ಸಮುದಾಯದೊಂದಿಗೆ ಸಂವಹನವನ್ನು ನಡೆಸಲು ಕೂಡಾ ನಾನು ಎದುರು ನೋಡುತ್ತಿದ್ದೇನೆ, ಇದು ಭಾರತದ ಹೊರಗಿರುವ ಅತಿ ದೊಡ್ಡ ಭಾರತೀಯ ಸಮುದಾಯವಾಗಿದೆ.

ನವದೆಹಲಿ

ನವೆಂಬರ್ 21, 2025